**ಕರ್ನಾಟಕ ಸರ್ಕಾರದ ನಡವಳಿಗಳು**

PRAMC
EIC
SE-1
SE-2
DS
EE
AEE-1
AEE-2
AEE-3

ವಿಷಯ:-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಹುಡ್ಕೋದಿಂದ ಪಡೆದ ಸಾಲಕ್ಕೆ ಆಗಸ್ಟ್ 2022 ರ ಮಾಹೆಗೆ ತ್ರೈಮಾಸಿಕ ಅಸಲು ಮತ್ತು ಬಡ್ಡಿ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:-ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ರವರ ಪತ್ರ ಸಂಖ್ಯೆ: ಕೆಆರ್‌ಡಿಸಿಎಲ್/ಎಂಡಿ/2022-23/1302, ದಿನಾಂಕ: 29-07-2022.

****

ಪ್ರಸ್ತಾವನೆ:-

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಯೋಜನೆಗಳಿಗಾಗಿ ಹುಡ್ಕೋ ಸಂಸ್ಥೆಯಿಂದ ವಿವಿಧ ರಾಜ್ಯ ಹೆದ್ದಾರಿ ಮತ್ತು ಸೇತುವೆ ನಿರ್ಮಾಣ ಕಾಮಗಾರಿಗಳಿಗೆ ಪಡೆದ ಸಾಲದ ಮೊತ್ತ ಆಗಸ್ಟ್ 2022ರ ಮಾಹೆಗೆ ಒಟ್ಟು ರೂ.62,44,74,622/- ಗಳು ಬಾಕಿ ಉಳಿದಿದ್ದು, ಈಗ ತ್ರೈಮಾಸಿಕ ಅಸಲು ರೂ.4,50,00,000/- ಗಳು ಹಾಗೂ ಬಡ್ಡಿ ರೂ.1,74,71,602/- ಗಳಲ್ಲಿ Adjustment of Interest amount as per HUDCO Demandನ ಮೊತ್ತ ರೂ.69,900/- ಗಳ ವ್ಯವಕಲನ (-) ಪರಿಗಣಿಸಿ ಬಡ್ಡಿ ಒಟ್ಟು ಮೊತ್ತ ರೂ.1,74,01,702/- ಗಳಾಗಿದ್ದು, ಅಸಲು ಮತ್ತು ಬಡ್ಡಿ ಮೊತ್ತ ಸೇರಿದಂತೆ ಒಟ್ಟು ರೂ.6,24,01,702/- ಗಳನ್ನು ಹುಡ್ಕೋಗೆ ಪಾವತಿಸಬೇಕಾಗಿರುವುದರಿಂದ, ಸದರಿ ಮೊತ್ತವನ್ನು ಬಿಡುಗಡೆ ಮಾಡಬೇಕೆಂದು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರು ಮೇಲಿನ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

2022-23ನೇ ಸಾಲಿಗೆ ಲೆಕ್ಕ ಶೀರ್ಷಿಕೆ 5054-80-190-0-01-240 ಸಾಲ ಮೇಲುಸ್ತುವಾರಿ ಅಡಿಯಲ್ಲಿ ಅಸಲು ತೀರುವಳಿಗಾಗಿ ರೂ.2000.00 ಲಕ್ಷಗಳನ್ನು ಆಯವ್ಯಯದಲ್ಲಿ ಹಂಚಿಕೆ ಮಾಡಲಾಗಿದೆ. ಅದರಂತೆ, ಅಸಲು ಅಡಿಯಲ್ಲಿ ಇಲ್ಲಿಯವರೆಗೆ ರೂ.450.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ರೂ.1550.00 ಲಕ್ಷಗಳು ಬಾಕಿ ಉಳಿದಿರುತ್ತದೆ.

ಮುಂದುವರೆದು, ಲೆಕ್ಕ ಶೀರ್ಷಿಕೆ 3054-80-190-0-01-240 ಋಣ ಸೇವೆಗಳು ಬಡ್ಡಿಯ ತೀರುವಳಿಗಾಗಿ ರೂ.4458.61 ಲಕ್ಷಗಳನ್ನು ಆಯವ್ಯಯದಲ್ಲಿ ಹಂಚಿಕೆ ಮಾಡಲಾಗಿದೆ. ಅದರಂತೆ, ಬಡ್ಡಿ ಅಡಿಯಲ್ಲಿ ಇಲ್ಲಿಯವರೆಗೆ ರೂ.205.76 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ರೂ.4252.85 ಲಕ್ಷಗಳು ಬಾಕಿ ಉಳಿದಿರುತ್ತದೆ.

AE-3

965
02/9/22

ಸದರಿ ಪ್ರಸ್ತಾವನೆಯನ್ನು ಸರ್ಕಾರದಲ್ಲಿ ಕೂಲಂಕುಷವಾಗಿ ಪರಿಶೀಲಿಸಲಾಗಿದ್ದು, ಖಜಾನೆ-2ರಲ್ಲಿ ಲಭ್ಯವಿರುವಂತೆ ಅಸಲು ಅಡಿಯಲ್ಲಿ ಆಗಸ್ಟ್ 2022ರ ಮಾಹೆಗೆ ಆರ್ಥಿಕ ಇಲಾಖೆ ಸಹಮತಿಸಿರುವಂತೆ ರೂ.450.00 ಲಕ್ಷಗಳನ್ನು ಹಾಗೂ ಬಡ್ಡಿ ಅಡಿಯಲ್ಲಿ ರೂ.174.02 ಲಕ್ಷಗಳನ್ನು ಬಿಡುಗಡೆ ಮಾಡಲು ಲಭ್ಯವಿದ್ದು, ಅದರಂತೆ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಲೋಇ ಇ-185 ಇಎಪಿ 2022 ಬೆಂಗಳೂರು, ದಿನಾಂಕ: 18-08-2022**

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು ಹುಡ್ಕೋದಿಂದ ಪಡೆದುಕೊಂಡಿರುವ ಸಾಲದ ಬಾಬತ್ತಿಗೆ ಪ್ರಸ್ತುತ 2022-23ನೇ ಸಾಲಿನ ಆಗಸ್ಟ್ 2022ರ ಮಾಹೆಗೆ ಖಜಾನೆ-2ರಲ್ಲಿ ಲಭ್ಯವಿರುವಂತೆ ಅಸಲು ಲೆಕ್ಕ ಶೀರ್ಷಿಕೆ 5054-80-190-0-01-240 ಋಣ ಮೇಲುಸ್ತುವಾರಿ ಅಡಿಯಲ್ಲಿ ರೂ.450.00 ಲಕ್ಷಗಳನ್ನು (ನಾಲ್ಕು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಹಾಗೂ ಬಡ್ಡಿ ಲೆಕ್ಕ ಶೀರ್ಷಿಕೆ 3054-80-190-0-01-240 ಋಣ ಸೇವೆಗಳು ಬಡ್ಡಿ ಅಡಿಯಲ್ಲಿ ರೂ.174.02 ಲಕ್ಷಗಳನ್ನು (ಒಂದು ಕೋಟಿ ಎಪ್ಪತ್ನಾಲ್ಕು ಲಕ್ಷದ ಎರಡು ಸಾವಿರ ರೂಪಾಯಿಗಳು ಮಾತ್ರ) ಒಟ್ಟು ರೂ.624.02 ಲಕ್ಷಗಳನ್ನು (ಆರು ಕೋಟಿ ಇಪ್ಪತ್ನಾಲ್ಕು ಲಕ್ಷದ ಎರಡು ಸಾವಿರ ರೂಪಾಯಿಗಳು ಮಾತ್ರ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಲಾಗಿದೆ.

ಹೀಗೆ ಬಿಡುಗಡೆ ಮಾಡಲಾದ ಹಣವನ್ನು ಡ್ರಾ ಮಾಡಲು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರು ಸಹಾಯಾನುದಾನ ಸ್ವೀಕರ್ತ ರಸೀದಿ (Grant in Aid Payee receipt) ಬಿಲ್ಲನ್ನು ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ ಇವರಿಂದ ಮೇಲುರುಜು ಮಾಡಿಸಿ, ಈ ಸ್ವೀಕರ್ತ ರಸೀದಿಯನ್ನು ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿಗೆ ಸಲ್ಲಿಸಿ ಡ್ರಾ ಮಾಡತಕ್ಕದ್ದು.

ಈ ಹಣ ಬಿಡುಗಡೆ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2022, ದಿನಾಂಕ: 04-04-2022 ರಲ್ಲಿ ಆಡಳಿತ ಇಲಾಖೆಯ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

18/08/2022
**(ರಾಮಚಂದ್ರಪ್ಪ ಕೆ.ಪನ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಬಾಹ್ಯ ಅನುದಾನಿತ ಯೋಜನೆಗಳು (ಇಎಪಿ)
ಲೋಕೋಪಯೋಗಿ ಇಲಾಖೆ

**ಪ್ರತಿಯನ್ನು :-**

1. ಮಹಾಲೇಖಪಾಲರು (ಅಕೌಂಟ್ಸ್) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
8. ಮುಖ್ಯ ವಲಯಾಧಿಕಾರಿ, ಹುಡ್ಕೋ, ಮಣಿಪಾಲ್ ಸೆಂಟರ್, ಬೆಂಗಳೂರು.
9. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, (ಲೋಕೋಪಯೋಗಿ ಆರ್ಥಿಕ ಕೋಶ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.

. . . . . 3

10. ಜಂಟಿ ನಿರ್ದೇಶಕರು, ಸ್ಟೇಟ್ ಹುಜೂರ್ ಟ್ರೆಷರಿ, ಕೆ.ಆರ್.ಸರ್ಕಲ್, ಬೆಂಗಳೂರು.
11. ಜಂಟಿ ನಿರ್ದೇಶಕರು, ಟಿ.ಎನ್.ಎಮ್.ಸಿ ಖನಿಜ ಭವನ, ಬೆಂಗಳೂರು.
12. ಮುಖ್ಯ ಇಂಜಿನಿಯರ್, PRAMC, ಲೋಕೋಪಯೋಗಿ ಇಲಾಖೆ, ಕೆಆರ್ ವೃತ್ತ, ಬೆಂಗಳೂರು ರವರಿಗೆ ವೆಬ್ ಸೈಟ್ನಲ್ಲಿ ಪ್ರಕಟಿಸಲು.
13. ಹೆಚ್ಚುವರಿ ಪ್ರತಿಗಳು.